**(ಇಂದು ದಿಃ 05-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಪಾಟೀ ಸವಾಲುಃ-7 ಮತ್ತು 8ನೇ ಪ್ರತಿವಾದಿಯರ ಪರ ಶ್ರೀ.BSS ವಕೀಲರಿಂದಃ-**

ದಾವಾ ಸ್ವತ್ತುಗಳು ಮುಂಚೆ ನನ್ನ ತಾಯಿ ಭೀಮವ್ವ ನ ಹೆಸರಿನಲ್ಲಿದ್ದವು ಎಂದರೆ ಸರಿ. ಭೀಮವ್ವ ಬದುಕಿರುವಾಗ ನಾನು ಮತ್ತು ಭೀಮವ್ವ ಸೇರಿಕೊಂಡು ದಾವಾ ಸ್ವತ್ತುಗಳನ್ನು 1ನೇ ಪ್ರತಿವಾದಿ ಹೆಸರಿಗೆ ಮಾಡಿದ್ದೇವೆ ಎಂದರೆ ಸರಿ. ನಾನು ಮತ್ತು 1ನೇ ಪ್ರತಿವಾದಿ ಒಂದೇ ಮನೆಯಲ್ಲಿ ವಾಸವಿದ್ದೇವೆ ಎಂದರೆ ಸರಿ. 1ನೇ ಪ್ರತಿವಾದಿ 7 ರಿಂದ 10 ನೇ ಪ್ರತಿವಾದಿಯರಿಗೆ ಜಮೀನು ಮಾರಾಟ ಮಾಡಿರುವುದು ನನಗೆ ಗೊತ್ತು ಎಂದರೆ ಸರಿ. ನನ್ನ ಮೊಮ್ಮಗ ಸಿದ್ದಪ್ಪನ ಆರೋಗ್ಯ ಸರಿಯಿಲ್ಲ ದ ಕಾರಣ ಆತನ ವೈದ್ಯಕೀಯ ವೆಚ್ಚಕ್ಕೆ ಎಂದು 1ನೇ ಪ್ರತಿವಾದಿ ಜಮೀನುಗಳನ್ನು 7 ರಿಂದ 10 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. (9 ಮತ್ತು 10 ನೇ ಪ್ರತಿವಾದಿಯರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಅನುಮತಿ ಕೋರಿದ್ದು ನೀಡಲಾಯಿತು).

ಪಾಟೀ ಸವಾಲು ಃ 1ನೇ ಪ್ರತಿವಾದಿಯ ಪರ ಶ್ರೀ HLA ವಕೀಲರಿಂದಃ

ದಾವಾ ಆಸ್ತಿಗಳನ್ನು ನನ್ನ ತಾಯಿ ಬದುಕಿದ್ದಾಗ 1ನೇ ಪ್ರತಿವಾದಿ ಹೆಸರಿಗೆ ಮಾಡಿದ್ದಾರೆ ಎಂದರೆ ಸರಿ. ವಾದಿಯರು ಬೇರೆ ವಾಸವಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯರಿಗೆ 1ನೇ ಪ್ರತಿವಾದಿ ಮನೆ ಕಟ್ಟಿಸಿಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯರ ಖರ್ಚನುನ 1ನೇ ಪ್ರತಿವಾದಿ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ, ದಾವಾ ಆಸ್ತಿಗಳಿಗೆ 1ನೇ ಪ್ರತಿವಾದಿ ಸಂಪೂರ್ಣ ಮಾಲೀಕ ಮತ್ತು ಕಬ್ಜಾದಾರ ಎಂದರೆ ಸರಿ. ದಾವಾ ಸ್ವತ್ತುಗಳಲ್ಲಿ ವಾದಿಯರಿಗೆ ಯಾವುದೇ ಹಕ್ಕು ಮತ್ತು ಭಾಗ ಇಲ್ಲ ಎಂದರೆ ಸರಿ. 1ನೇ ಪ್ರತಿವಾದಿಗೆ ತೊಂದರೆ ಕೊಡುವ ಸಲುವಾಗಿ ವಾದಿಯರು ಸುಳ್ಳು ದಾವೆ ಸಲ್ಲಿಸಿದ್ದಾರೆಎಂದರೆ ಸರಿ. ದಾವಾ ಜಮೀನುಗಳಲ್ಲಿ

OS No.13/2022

DW-5

ನನಗೆ ಭಾಗ ಬರುತ್ತದೆ ಎಂದು ನಾನು ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**